ಕಂದಾಯ ಇಲಾಖೆ

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಪಹಣಿ:ಅಪೀಲು:82/2015-16 ದಿನಾಂಕ:09.06.2016.

**ಉಪಸ್ಥಿತರು: ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * *

**ವಾದಿಗಳು: ಶ್ರೀ/ ಶ್ರೀಮತಿ**

1] ಶಿವನಗೌಡ ತಂದೆ ಚನ್ನವೀರನಗೌಡ ಒಡೆಯರ್
ವಾಸ: ಸಾಕೀನ: ಮೈಲಾರ,
ತಾ: ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

**[ಶ್ರೀ ಎಂ.ಬಿ.ಕೋರಿ, ವಕೀಲರು, ಹೂವಿನಹಡಗಲಿ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹೂವಿನಹಡಗಲಿ.
2] ಕರೇಗೌಡ ತಂದೆ ಚಂದ್ರಶೇಖರಪ್ಪ ಗುಡಗೂರ,
3] ಚನ್ನಬಸವನಗೌಡ ತಂದೆ ಚಂದ್ರಶೇಖರಪ್ಪ ಗುಡಗೂರ,
ಪ್ರತಿವಾದಿ-2 & 3 ರವರ ವಾಸ: ಸಾ: ಮೈಲಾರ,
ಹೂವಿನಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ.
4] ಹಿರಿಯವ್ವ ಗಂಡ ಬಸವಣ್ಯಪ್ಪ ಇಟ್ಟಿಗಿ
ವಾಸ: ಸಾ: ದಾಸನಹಳ್ಳಿ, ಹೂವಿನಹಡಗಲಿ
ತಾಲೂಕು, ಬಳ್ಳಾರಿ ಜಿಲ್ಲೆ.

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಹಿರೇಹಡಗಲಿ | ಮೈಲಾರ | 285 ಪೈಕಿ | 01 ಎಕರೆ 72 ಸೆಂಟ್ಸ್ |

**ಪೀಠಿಕೆ:-**

ಹಡಗಲಿ ತಾಲೂಕು ಹಿರೇಹಡಗಲಿ ಹೋಬಳಿ ಮೈಲಾರ ಗ್ರಾಮದ ಸ.ನಂ.285 ಪೈಕಿ ವಿಸ್ತೀರ್ಣ:08 ಎಕರೆ 00 ಸೆಂಟ್ಸ್ ಪೈಕಿ ವಿಸ್ತೀರ್ಣ:01 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹಿರೇಹಡಗಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ:ಹೆಚ್.3/2013-14 ದಿನಾಂಕ:21.08.2013 ಹಾಗೂ ತಹಶೀಲ್ದಾರರು, ಹೂವಿನಹಡಗಲಿ ಇವರ ಹಿಂಬರಹ ಸಂಖ್ಯೆ:ಸಂ/ಕಂ/ಪಹಣಿ/511/2012-13 ದಿನಾಂಕ:15.11.2012 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136[2] ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:22.09.2015 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:05.11.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ:03.03.2016 ರವರೆಗೆ ಮುಗಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಹಡಗಲಿ ತಾಲೂಕು ಹಿರೇಹಡಗಲಿ ಹೋಬಳಿ ಮೈಲಾರ ಗ್ರಾಮದ ಸ.ನಂ.285 ಪೈಕಿ ವಿಸ್ತೀರ್ಣ:08 ಎಕರೆ 00 ಸೆಂಟ್ಸ್ ಶಂಕರಗೌಡ್ರ ಪುಟ್ಟನಗೌಡ್ರ ಇವರದ್ದಾಗಿದ್ದು, ಇದರಲ್ಲಿ ಸದರಿಯವರು ಹಾಗೂ ಇವರ ಹೆಂಡತಿ ಬಸಲಿಂಗಮ್ಮ ಇವರು ತಮ್ಮ ಮನೆ ಅಡಚಣೆಗಾಗಿ ಮಾರಿರುವುದಾಗಿ ತಿಳಿಸಿರುತ್ತಾರೆ. ಸ.ನಂ.285 ಪೈಕಿ ವಿಸ್ತೀರ್ಣ:08 ಎಕರೆ 00 ಸೆಂಟ್ಸ್ ಪೈಕಿ ವಿಸ್ತೀರ್ಣ:01 ಎಕರೆ 72 ಸೆಂಟ್ಸ್ ಜಮೀನನ್ನು ವಾದಿಯಾದ ಶಿವನಗೌಡ ತಂದೆ ಚನ್ನವೀರನಗೌಡ ಒಡೆಯರ ಇವರಿಗೆ ಸಂಬಂಧಿಸಿದ್ದು, ವಾದಿಯು ಸದರಿ ವ್ಯಾಜ್ಯದ ಜಮೀನನ್ನು ಪುಟ್ಟನಗೌಡ್ರ ಶಂಕರಗೌಡ್ರ ಇವರ ಧರ್ಮಪತ್ನಿ ಬಸವಲಿಂಗಮ್ಮ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ: 605/1986-87 ದಿನಾಂಕ:25.03.1987 ರಂದು ರೂ.6000/- ಗಳಿಗೆ ಕ್ರಯಕ್ಕೆ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಹಡಗಲಿ ತಾಲೂಕು ಹಿರೇಹಡಗಲಿ ಹೋಬಳಿ ಮೈಲಾರ ಗ್ರಾಮದ ಸ.ನಂ.285 ಪೈಕಿ ವಿಸ್ತೀರ್ಣ: 08 ಎಕರ 00 ಸೆಂಟ್ಸ್ ಜಮೀನು ಈ ಕೆಳಕಂಡಂತೆ ಕ್ರಯವಾಗಿರುತ್ತದೆ.

| ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ | ವಿಕ್ರಯದರರು | ಕ್ರಯದಾರರು | ದಸ್ತಾವೇಜು ಸಂಖ್ಯೆ ಮತ್ತು ದಿನಾಂಕ |
|---|---|---|---|---|---|---|
| ಹಡಗಲಿ | ಮೈಲಾರ | 285 ಪೈಕಿ | 03.00 | ಶಂಕರಗೌಡ | ಚಂದ್ರಶೇಖರಪ್ಪ | 318/03.05.1973 |
| ಹಡಗಲಿ | ಮೈಲಾರ | 285 ಪೈಕಿ | 02.00 | ಶಂಕರಗೌಡ | ನಿಂಗಪ್ಪ | 9/05.04.1976 |
| ಹಡಗಲಿ | ಮೈಲಾರ | 285 ಪೈಕಿ | 01.28 | ಶಂಕರಗೌಡ | ಚಂದ್ರಶೇಖರಪ್ಪ | 393/20.07.1979 |
| ಹಡಗಲಿ | ಮೈಲಾರ | 285 ಪೈಕಿ | 01.72 | ಬಸಲಿಂಗಮ್ಮ | ಶಿವನಗೌಡ್ರ ವಡಿಯರ್ | 605/25.03.1987 |
| | | **ಒಟ್ಟು** | **08.00** | | | |

ಸದರಿ ಕ್ರಯ ವಹಿವಾಟುಗಳು ಕಾನೂನಿನ ಪ್ರಕಾರವಾಗಿದ್ದು, ಅವರವರ ಪಾಲಿನ ಜಮೀನುಗಳ ಮೇಲೆ ತಮ್ಮ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.

ವಾದಿಯು ಸದರಿ ವ್ಯಾಜ್ಯದ ಜಮೀನನ್ನು ಕ್ರಯಕ್ಕೆ ಪಡೆದ ದಿನದಿಂದ 1987-88 ರಿಂದ ಈವರೆಗೂ ಅವರೇ ಉಳುಮೆ ಮಾಡುತ್ತಿರುವುದಾಗಿ, ಸದರಿ ಜಮೀನನ 1987-88 ರಿಂದ 2005-06 ರವರೆಗೂ ವಾದಿಯ ಹೆಸರೇ ಪಹಣಿ ಪತ್ರಿಕೆಯಲ್ಲಿ ಬರುತ್ತಿದ್ದು, ತದನಂತರದಲ್ಲಿ ವಾದಿಯ ಹೆಸರು ಪಹಣಿಯಲ್ಲಿ ತಾಂತ್ರಿಕ ದೋಷದಿಂದ ಕೈ ಬಿಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ವ್ಯಾಜ್ಯದ ಜಮೀನಿನ ಕ್ರಯಕ್ಕೆ ಸಂಬಂಧಿಸಿದಂತೆ ಇ.ಸಿ., ಕ್ರಯ ಪತ್ರ, ಮ್ಯುಟೇಷನ್, ಹಾಗೂ ಪಹಣಿ ದಾಖಲೆಗಳು ಹೊಂದಿರುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿ-2 ಮತ್ತು 3 ರವರು ಸದರಿ ವ್ಯಾಜ್ಯದ ಜಮೀನನ್ನು ದಿನಾಂಕ:02.07.2013 ರಂದು ಪ್ರತಿವಾದಿ-1 ರವರಲ್ಲಿ ಅರ್ಜಿ ಸಲ್ಲಿಸಿ ಎಂ.ಆರ್.ನಂ.2013-14 ರ ಮೂಲಕ ಮ್ಯುಟೇಷನ್ ಮಾಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ವಾದಿಯು ಪ್ರತಿವಾದಿ-1 ರವರಲ್ಲಿ ನೋಂದಾಯಿತ ಕ್ರಯ ಪ್ರಕಾರ ತಮ್ಮ ಹೆಸರನ್ನು ಸದರಿ ವ್ಯಾಜ್ಯದ ಜಮೀನಿನಲ್ಲಿ ನಮೂದು ಮಾಡಲು ಕೋರಿ ಅರ್ಜಿ ಸಲ್ಲಿಸಲಾಗಿ ಪ್ರತಿವಾದಿ-1 ರವರು ಹಿಂಬರಹ ನೀಡಿರುತ್ತಾರೆಂದು, ಸದರಿ ಹಿಂಬರಹದಿಂದ ಬಾಧಿತಗೊಂಡ ವಾದಿಯು ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಸದರಿ ಪ್ರತಿವಾದಿ-2, 3 ಮತ್ತು 4 ರವರು ಸದರಿ ಜಮೀನಿನ ಬಗ್ಗೆ ಯವುದೇ ತಕರಾರು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

ವಾದಿಪರ ವಕೀಲರು ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:605/1986-87 ದಿನಾಂಕ: 25.03.1987 ರ ಕ್ರಯ ಪತ್ರದ ಪ್ರತಿಯನ್ನು, ಇ.ಸಿ. ಪ್ರತಿಯನ್ನು ಹಾಗೂ 1968-69 ರಿಂದ 2011-12 ರವರೆಗಿನ ಪಹಣಿ ಪ್ರತಿಗಳನ್ನು, ಎಂ.ಆರ್.ಸಂಖ್ಯೆ:291/1986-87 ದಿ:27.04.1987 ರ ಮ್ಯುಟೇಷನ್ ಪ್ರತಿಯನ್ನು ಲಗತ್ತಿಸಿದ್ದು, ಸದರಿ ಹಕ್ಕು ಬದಲಾವಣೆಯನ್ನು ಎತ್ತಿಹಿಡಿಯುವಂತೆ, ಪ್ರತಿವಾದಿ-1 ರವರು ಮಾಡಿರುವ ಪ್ರಶ್ನಿತ ಹಕ್ಕು ಬದಲಾವಣೆ ಆದೇಶವನ್ನು ತಳ್ಳಿಹಾಕುವಂತೆ ಹಾಗೂ ನೋಂದಾಯಿತ ಕ್ರಯ ದಸ್ತಾವೇಜಿನ ಪ್ರಕಾರ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ಮನವಿ ಮಾಡಿಕೊಂಡಿರುತ್ತಾರೆ. ಸದರಿ ವಿಚಾರಣೆಗೆ ಪ್ರತಿವಾದಿಗಳು ಸತತವಾಗಿ ಗೈರು ಹಾಜರಿರುವುದು ಕಂಡುಬಂದಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇರೆಗೆ ಹಡಗಲಿ ತಾಲೂಕು ಹೀರೆಹಡಗಲಿ ಹೋಬಳಿ ಮೈಲಾರ ಗ್ರಾಮದ ಸ.ನಂ.285 ಪೈಕಿ ವಿಸ್ತೀರ್ಣ:08 ಎಕರೆ 00 ಸೆಂಟ್ಸ್ ಪೈಕಿ ವಿಸ್ತೀರ್ಣ:01 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನೀರಿಕ್ಷಕರು, ಹೀರೆಹಡಗಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ.:ಹೆಚ್.3/2013-14 ದಿನಾಂಕ:21.08.2013 ಹಾಗೂ ತಹಶೀಲ್ದಾರರು, ಹೂವಿನಹಡಗಲಿ ಇವರ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/511/2012-13 ದಿನಾಂಕ:15.11.2012 ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕ್ಕುತ್ತಾ, ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:605/1986-87 ದಿನಾಂಕ:25.03.1987 ರ ಪ್ರಕಾರ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗಿಕರಿಸುತ್ತಾ,** ಹಡಗಲಿ ತಾಲೂಕು ಹೀರೆಹಡಗಲಿ ಹೋಬಳಿ ಮೈಲಾರ ಗ್ರಾಮದ ಸ.ನಂ.285 ಪೈಕಿ ವಿಸ್ತೀರ್ಣ:08 ಎಕರೆ 00 ಸೆಂಟ್ಸ್ ಪೈಕಿ ವಿಸ್ತೀರ್ಣ:01 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನೀರಿಕ್ಷಕರು, ಹೀರೆಹಡಗಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ.ಹೆಚ್.3/2013-14 ದಿನಾಂಕ:21.08.2013 ಹಾಗೂ ತಹಶೀಲ್ದಾರರು, ಹೂವಿನಹಡಗಲಿ ಇವರ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/511/2012-13 ದಿನಾಂಕ:15.11.2012 ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕುತ್ತಾ, ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:605/1986-87 ದಿನಾಂಕ:25.03.1987 ರ ಪ್ರಕಾರ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಡಗಲಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ]**
**ಸಹಾಯಕ ಆಯುಕ್ತರು,**
**ಹೊಸಪೇಟೆ**

ವಾದಿ: ಪ್ರತಿವಾದಿಗಳಿಗೆ
ಪ್ರತಿಯನ್ನು:- ತಹಶೀಲ್ದಾರರು, ಹಡಗಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.